ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಗಡಿ ವಿವಾದ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE 21/12/19

# ಮತ್ತೆ ಮಹಾ ಉದ್ಧಟತನ

## ಬೆಳಗಾವಿ ಕರ್ನಾಟಕ ಆಕ್ರಮಿತ ಪ್ರದೇಶ ಎಂದ ಠಾಕ್ರೆ

ವಿಜಯವಾಣಿ ಸುದ್ದಿಜಾಲ ಬೆಳಗಾವಿ

ಶಿವಸೇನೆ ಜತೆಗಿನ ಮೈತ್ರಿ ಕಡಿದುಕೊಂಡ ಬಿಜೆಪಿ ವಿರುದ್ಧ ಮರಾಠಿಗರನ್ನು ಎತ್ತಿಕಟ್ಟಲು ಮುಂದಾಗಿರುವ ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಬೆಳಗಾವಿ, ನಿಪ್ಪಾಣಿ, ಕಾರವಾರ ಗಡಿ ಭಾಗವನ್ನು 'ಕರ್ನಾಟಕ ಆಕ್ರಮಿತ ಮಹಾರಾಷ್ಟ್ರ' ಎನ್ನುವ ಮೂಲಕ ಹೊಸ ವಿವಾದ ಸೃಷ್ಟಿಸಿದ್ದಾರೆ.

ದೇಶದಲ್ಲಿನ ಹಿಂದುಗಳ ರಕ್ಷಣೆಗಾಗಿ ಶಿವಸೇನೆ ಹೋರಾಟ ನಡೆಸುತ್ತಿದೆ. ಆದರೆ ಕರ್ನಾಟಕದಲ್ಲಿರುವ ಹಿಂದು ಮರಾಠಿಗರಿಗೆ ಅನ್ಯಾಯ ಆಗುತ್ತಿದೆ. ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಷಾ ಏಕೆ ಮಾತನಾಡುತ್ತಿಲ್ಲ ಎಂದು ನಾಗ್ಪುರದಲ್ಲಿ ನಡೆಯುತ್ತಿರುವ ವಿಧಾನಸಭೆಯ ಚಳಿಗಾಲದ ಅಧಿವೇಶನದಲ್ಲಿ ವಾಗ್ದಾಳಿ ನಡೆಸಿದ್ದಾರೆ. ವೀರ ಸಾವರ್ಕರ್ ವಿಷಯದ ಮೇಲೆ ನಡೆದ ಸುದೀರ್ಘ ಚರ್ಚೆ ಸಂದರ್ಭದಲ್ಲಿ ಉದ್ಧವ್ ತಮ್ಮ ಭಾಷಣವನ್ನು ಬಿಜೆಪಿ ಟೀಕೆಗೇ ಹೆಚ್ಚು ಸೀಮಿತಗೊಳಿಸಿದರು.

**ಸುಪ್ರೀಂನಲ್ಲಿದೆ:** ಕರ್ನಾಟಕ ಮತ್ತು ಮಹಾರಾಷ್ಟ್ರ ನಡುವಿನ ಗಡಿ ವಿವಾದ ಸುಪ್ರೀಂಕೋರ್ಟ್‌ನಲ್ಲಿ ಇರುವಾಗ ಉದ್ಧವ್ ತೆಗೆದಿರುವ ಈ ತಗಾದೆ ಬಿಜೆಪಿ ವಿರುದ್ಧ ತಮ್ಮ ಅಸ್ತಿತ್ವ ಉಳಿಸಿಕೊಳ್ಳುವ ಹಾಗೂ ಗಡಿ, ಭಾಷಾ ವಿವಾದವನ್ನು ಜೀವಂತವಾಗಿಟ್ಟು ಮರಾಠಿ ಮತಗಳನ್ನು ಕಾಯ್ದುಕೊಳ್ಳುವ ತಂತ್ರಗಾರಿಕೆ ಎಂದೇ ವಿಶ್ಲೇಷಿಸಲಾಗುತ್ತಿದೆ.

ಪುಟ 3



### ಉದ್ಧವ್ ಹೇಳಿದ್ದೇನು?

- ಬೆಳಗಾವಿ, ಅದರ ಸುತ್ತಮುತ್ತಲ ಮರಾಠಿ ಮಾತನಾಡುವ ಪ್ರದೇಶಗಳ ಬಿಡುಗಡೆಗೆ ಬಿಜೆಪಿಯ ನೆರವು ಅಗತ್ಯ
- 1956ರಲ್ಲಿ ಭಾಷೆ ಆಧಾರದಲ್ಲಿ ರಾಜ್ಯಗಳ ಪುನರ್‌ವಿಂಗಡಣೆಯಾದ ನಂತರ ಕರ್ನಾಟಕ ಗಡಿಯ ಒಳಗಿರುವ ಮರಾಠಿ ಮಾತನಾಡುವ ಜನರ ಆಶೋತ್ತರ ಪೂರ್ಣಗೊಳಿಸಬೇಕಾಗಿದೆ

### ಕನಿಷ್ಠ ವಿವೇಕ ಇರಲಿ

ದೇಶದ ರಕ್ಷಣೆ ವಿಚಾರಕ್ಕೂ ಬೆಳಗಾವಿ ವಿಚಾರಕ್ಕೂ ಹೋಲಿಕೆ ಮಾಡಿ ಮಹಾರಾಷ್ಟ್ರ ಸಿಎಂ ಮಾತನಾಡುವುದೇ ಸರಿಯಲ್ಲ. ಇವೆರಡೂ ಪ್ರತ್ಯೇಕ ವಿಚಾರ. ಮಹಾಜನ್ ವರದಿ ಜಾರಿಗೂ ಮುನ್ನವೇ ಕರ್ನಾಟಕ ಒಪ್ಪಿಗೆ ನೀಡಿದ್ದರಿಂದ ಕರ್ನಾಟಕಕ್ಕೆ ಸೇರಬೇಕಿದ್ದ ಮಡಕಶಿರ, ಕಾಸರಗೋಡು ಬೇರೆ ರಾಜ್ಯಕ್ಕೆ ಹೋದರೂ ಮರುಮಾತನಾಡಿಲ್ಲ. ಆದರೆ ಬೆಳಗಾವಿ ವಿಚಾರದಲ್ಲಿ ಮಹಾರಾಷ್ಟ್ರ ಮಾತ್ರ ತಕರಾರು ತೆಗೆಯುತ್ತಲೇ ಇದೆ. ಬೆಳಗಾವಿ ವಿಚಾರ ಸರ್ವೋಚ್ಚ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುವಾಗ ಕ್ಷುಲ್ಲಕ ರಾಜಕಾರಣಕ್ಕೆ ಬಳಕೆ ಮಾಡಬಾರದು. ಸುಪ್ರೀಂ ತೀರ್ಪು ಬರುವವರೆಗಾದರೂ ಮಾತನಾಡಬಾರದೆಂಬ ಕನಿಷ್ಠ ವಿವೇಚನೆಯಾದರೂ ಅವರಿಗೆ ಇರಬೇಕು.

| ಪ್ರೊ. ಬರಗೂರು ರಾಮಚಂದ್ರಪ್ಪ, ಹಿರಿಯ ಸಾಹಿತಿ



ಮಹಾರಾಷ್ಟ್ರದ ಮುಂಬೈ, ಸೊಲ್ಲಾಪುರ, ಪುಣೆ ಇನ್ನಿತರ ಪ್ರದೇಶಗಳಲ್ಲಿ ಕನ್ನಡಿಗರು ಅಧಿಕ ಪ್ರಮಾಣದಲ್ಲಿದ್ದಾರೆ. ಹೀಗಾಗಿ ಅದನ್ನು ಮಹಾರಾಷ್ಟ್ರ ಆಕ್ರಮಿತ ಕರ್ನಾಟಕ ಪ್ರದೇಶ ಎನ್ನಬೇಕಾ? ಗಡಿ ಸಮಸ್ಯೆ ಇತ್ತೀಚೆಗೆ ಉಂಟಾಗಿದ್ದಾ? ಮಹಾರಾಷ್ಟ್ರ, ಕೇಂದ್ರದಲ್ಲಿ ನಾಲ್ಕೈದು ದಶಕಗಳ ಕಾಲ ಆಡಳಿತ ನಡೆಸಿದ ಕಾಂಗ್ರೆಸ್ ನಾಯಕರು ಏಕೆ ಗಡಿ ಸಮಸ್ಯೆ ಪರಿಹರಿಸಲಿಲ್ಲ? ಶಿವಸೇನೆ ತನ್ನ ಅಧಿಕಾರದಲ್ಲಿ ಏಕೆ ಗಡಿ ವಿಷಯ ಪ್ರಸ್ತಾಪಿಸಲಿಲ್ಲ. ಇತಿಹಾಸದ ಜ್ಞಾನ ಇಲ್ಲದವರು ಈ ರೀತಿ ಮಾತನಾಡುತ್ತಿದ್ದರೆ ಅವರಿಗೆ ಇನ್ನೇನು ಹೇಳಬೇಕು?

| ಸಿ.ಟಿ. ರವಿ ಕನ್ನಡ ಮತ್ತು ಸಂಸ್ಕೃತಿ ಸಚಿವ